# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಡಾ: ಉಮಾಶ್ರೀ (ನಾಮನಿರ್ದೇಶಿತರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1381**

**ಉತ್ತರಿಸಬೇಕಾದ ದಿನಾಂಕ : 18-12-2025**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಿಂದ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಯೋಜನೆಗಳನ್ನು ರೂಪಿಸಲಾಗಿದೆಯೇ; ರೂಪಿಸಿದ್ದಲ್ಲಿ ಅವುಗಳು ಯಾವುವು; | ಹೌದು.<br>ಸಹಕಾರ ಇಲಾಖೆಯಿಂದ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾಗೊಳಿಸಲಾಗುತ್ತಿದೆ.<br>1) ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>2) ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಸ್ಥೆಗಳ ಮೂಲಕ ವೈಯಕ್ತಿಕ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ರೂ.5.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರ ಮತ್ತು ಆದಾಯ ಸೃಷ್ಟಿಸುವ ಚಟುವಟಿಕೆ ಕೈಗೊಳ್ಳಲು ರೂ.5.00 ಲಕ್ಷದಿಂದ ರೂ.10.00 ಲಕ್ಷದವರೆಗಿನ ಸಾಲಗಳನ್ನು ಶೇ.4 ರ ಬಡ್ಡಿದರದಲ್ಲಿ ವಿತರಿಸುವ ಯೋಜನೆ ಜಾರಿಯಲ್ಲಿರುತ್ತದೆ. |
| ಆ) | ಕಳೆದ 2 ವರ್ಷಗಳಲ್ಲಿ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು); | ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ನೀಡುವ ಯೋಜನೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಿದ ಜಿಲ್ಲಾವಾರು ವಿವರವನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ.<br>ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಪ್ಯಾಕ್ಸ್‌ಗಳ ಮೂಲಕ ಸಾಲ ಪಡೆದು ನಿಗದಿತ ಅವಧಿಯಲ್ಲಿ ಸಾಲ ಮರು ಪಾವತಿಸುವ ಮಹಿಳಾ ಸ್ವಸಹಾಯ ಗುಂಪುಗಳ ಪರವಾಗಿ ಸಹಕಾರ ಸಂಸ್ಥೆಗಳಿಗೆ 2023-24 ನೇ ಸಾಲಿನಲ್ಲಿ ರೂ.9844.89 ಲಕ್ಷ ಹಾಗೂ 2024-25 ನೇ ಸಾಲಿನಲ್ಲಿ ರೂ. 1884.85 ಲಕ್ಷಗಳ ಬಡ್ಡಿ ಸಹಾಯ ಧನವನ್ನು ಬಿಡುಗಡೆಮಾಡಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ಸಲ್ಲಿಸಿದೆ. |

<table>
<tr>
<td>ಇ)</td>
<td>ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘದಿಂದ ಗರಿಷ್ಠ ಎಷ್ಟು ಮೊತ್ತದ ಸಾಲ ನೀಡಲಾಗುತ್ತಿದೆ; ಪಡೆದ ಸಾಲಕ್ಕೆ ನಿಗದಿ ಮಾಡಿರುವ ಬಡ್ಡಿಯ ದರ ಎಷ್ಟು;</td>
<td>ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತದಲ್ಲಿ ನೋಂದಣಿಯಾಗುವ ಸದಸ್ಯರುಗಳಿಗೆ ಸದರಿ ಸಂಘದ ಉಪವಿಧಿಗಳನ್ವಯ ಈ ಕೆಳಕಂಡಂತೆ ಸಾಲದ ಗರಿಷ್ಠ ಮಿತಿ ನಿಗಧಿ ಪಡಿಸಲಾಗಿದೆ.
<table>
<tr><th>ಕ್ರ ಸ</th><th>ಸಾಲದ ವಿವರ</th><th>ಸಾಲದಗರಿಷ್ಠ ಮಿತಿ</th><th>ಸಾಲದ ಮರುಪಾವತಿ ಗರಿಷ್ಠ ಅವಧಿ</th></tr>
<tr><td>1</td><td>ಆದಾಯೋತ್ಪನ್ನ ಚಟುವಟಿಕೆಗಳಿಗೆ / ಗುಡಿಕೈಗಾರಿಕೆ/ ಸಣ್ಣ ಉದ್ದಿಮೆಗಳಿಗೆ ಯೋಜನಾ ವರದಿಯನ್ನು ಆಧರಿಸಿ ಸಾಲ</td><td>ಸೂಕ್ತ ಭದ್ರತೆಯೊಂದಿಗೆ ಯೋಜನಾ ವರದಿಯ ಅನುಮೋದನೆಯನುಸಾರ ಸಾಲದ ಗರಿಷ್ಠ ಮಿತಿ ರೂ.50,000/-</td><td>12 ತಿಂಗಳು</td></tr>
<tr><td>2</td><td>ಒಬ್ಬರು ಅಥವಾ ಹೆಚ್ಚಿನ ಜಾಮೀನುದಾರರ ಭದ್ರತೆ ಮೇಲೆ</td><td>ಒಬ್ಬ ಸದಸ್ಯನ ಜಾಮೀನಿನೊಂದಿಗೆ ರೂ.25,000/- ಹಾಗೂ ಇಬ್ಬರು ಸದಸ್ಯರ ಜಾಮೀನಿನೊಂದಿಗೆ ರೂ.2,00,000/-</td><td>24 ತಿಂಗಳು</td></tr>
<tr><td>3</td><td>ವ್ಯಾಪಾರ ಉದ್ದೇಶಕ್ಕೆ ಅಥವಾ ಸ್ವಂತಕ್ಕೆ ಹೊಸ ವಾಹನಗಳಾದ ಸ್ಕೂಟರ್, ಕಾರು, ಆಟೋರಿಕ್ಷಾ ಖರೀದಿಸಲು ತೋರಾಧಾರ ಸಾಲ (ಹೈಪೋಥಿಕೇಷನ್ ಲೋನ್)</td><td>ವಾಹನದ ಮುಖ ಬೆಲೆಯ ಶೇಕಡಾ 70 ರಷ್ಟು, ಅಥವಾ ಗರಿಷ್ಠ ರೂ.5,00,000/-</td><td>60 ಮಾಸಿಕ ಕಂತುಗಳು</td></tr>
<tr><td>4</td><td>ಅವಧಿ ಠೇವಣಿ, ಪಿಗ್ಮಿ, ರೆಕರಿಂಗ್ ಡಿಪಾಸಿಟ್ ಅಥವಾ ಇತರೆ ಠೇವಣಿಗಳು ಆಧಾರದ ಮೇಲೆ</td><td>ಠೇವಣಿ ಮೊತ್ತದ ಶೇಕಡಾ 80 ರಷ್ಟು ಮಾತ್ರ</td><td>ಪ್ರಾಪ್ತ ಕಾಲದ ಮುನ್ನಾ ಅಥವಾ ಒಪ್ಪಿದ ದಿನಾಂಕಕ್ಕೆ</td></tr>
<tr><td>5</td><td>ಬಂಗಾರದ ಅಥವಾ ಬೆಳ್ಳಿ ಆಭರಣಗಳ ಒತ್ತೆಯ ಮೇಲೆ</td><td>ಮೌಲ್ಯದ ಶೇಕಡಾ 60 ರಷ್ಟು ಹಾಗೂ ಗರಿಷ್ಠ ರೂ. 5,00,000/-</td><td>12 ತಿಂಗಳು</td></tr>
<tr><td>6</td><td>ಸ್ಥಿರಾಸ್ತಿಗಳ ಹೈಪೋಥಿಕೇಷನ್ ಆಫ್ ಟೈಟಲ್ ಡೀಡ್ಸ್ ಆಧಾರದ ಮೇಲೆ.</td><td>ಮೌಲ್ಯದ ಶೇಕಡಾ 70 ರಷ್ಟು ಅಥವಾ ಗರಿಷ್ಠ ರೂ. 25,00,000/-</td><td>120 ಮಾಸಿಕ ಕಂತುಗಳು</td></tr>
<tr><td>7</td><td>ಗೃಹ ನಿರ್ಮಾಣ ಸಾಲ</td><td>ಅಂದಾಜು ವೆಚ್ಚದ ಶೇಕಡಾ 70% ಅಥವಾ ಗರಿಷ್ಠ ರೂ.25,00,000/-</td><td>ಗರಿಷ್ಠ 10 ವರ್ಷಗಳು</td></tr>
</table>
</td>
</tr>
</table>

| | | |
|---|---|---|
| | | ಸರ್ಕಾರದ ಮಾರ್ಗಸೂಚಿ ಹೊರಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ನಂತರದಲ್ಲಿ ಸಂಘದ ಉಪವಿಧಿಗಳಲ್ಲಿ(ಬೈಲಾ) ಯೋಜಿಸಿರುವಂತೆ ಕಾಲಕಾಲಕ್ಕೆ ಆಡಳಿತ ಮಂಡಳಿಯ ಸಭೆ ಸೇರಿ ತೀರ್ಮಾನಿಸಿದಂತೆ ಸಾಲ ಒದಗಿಸಬೇಕಾದ ಚಟುವಟಿಕೆ, ಸಾಲದ ಮೊತ್ತ ಹಾಗೂ ಬಡ್ಡಿ ದರವನ್ನು ತೀರ್ಮಾನಿಸಲಾಗುವುದು. |
| ಈ) | ಕಳೆದ 2 ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ಎಷ್ಟು ಜನ ಫಲಾನುಭವಿಗಳು ಲಾಭ ಪಡೆದಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು); | ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ನಿ, ಬೆಂಗಳೂರು ಈ ಸಹಕಾರ ಸಂಘವು ದಿನಾಂಕ:18/10/2025 ರಂದು ಹೊಸದಾಗಿ ನೋಂದಣಿಯಾಗಿರುತ್ತದೆ, ಆದ್ದರಿಂದ ಕಳೆದ ಎರಡು ವರ್ಷಗಳಲ್ಲಿ ಯಾವುದೇ ಫಲಾನುಭವಿಗಳಿರುವುದಿಲ್ಲ. |
| ಉ) | ಈ ಯೋಜನೆಯಲ್ಲಿ ಸಾಲ ಪಡೆಯಲು ಅನುಸರಿಸುವ ನಿಯಮಗಳೇನು? | ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ನಿ, ಬೆಂಗಳೂರು ಈ ಸಹಕಾರ ಸಂಘದ ಆಡಳಿತ ಮಂಡಳಿ ರಚನೆಯಾದ ನಂತರ ಸಂಘದಿಂದ ಸಾಲ-ಸೌಲಭ್ಯವನ್ನು ಪಡೆಯಲು ಅನುಸರಿಸುವ ನಿಯಮ / ಕಾರ್ಯವಿಧಾನಗಳನ್ನು ರಚಿಸಬೇಕಾಗಿರುತ್ತದೆ. |

**ಸಂಖ್ಯೆ: ಸಿಒ 334 ಸಿಎಲ್‌ಎಸ್ 2025**

**(ಸಿದ್ದರಾಮಯ್ಯ)**

ಮುಖ್ಯಮಂತ್ರಿ

ಅನುಬಂಧ-1

2023-24 ಹಾಗೂ 2024-25 ನೇ ಸಾಲಿನಲ್ಲಿ ಸಹಕಾರ ಸಂಘಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ ಮಂಜೂರು ಮಾಡಿರುವ ಜಿಲ್ಲಾವಾರು ವಿವರ

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | 2023-24 | 2024-25 |
|---|---|---|---|
| | | ಆರ್ಥಿಕ | ಆರ್ಥಿಕ |
| 1 | ಬೆಂಗಳೂರು 1ನೇ ವಲಯ | 0.66 | 0.66 |
| 2 | ಬೆಂಗಳೂರು 2ನೇ ವಲಯ | 0.700 | 0.70 |
| 3 | ಬೆಂಗಳೂರು 3ನೇ ವಲಯ | 0.66 | 0.66 |
| 4 | ಬೆಂಗಳೂರು 4ನೇ ವಲಯ | 0.67 | 0.66 |
| 5 | ಬೆಂಗಳೂರು (ಗ್ರಾ) | 0.66 | 0.66 |
| 6 | ರಾಮನಗರ | 0.66 | 0.66 |
| 7 | ತುಮಕೂರು | 0.70 | 0.70 |
| 8 | ಚಿತ್ರದುರ್ಗ | 0.66 | 0.66 |
| 9 | ಕೋಲಾರ | 0.67 | 0.66 |
| 10 | ಚಿಕ್ಕಬಳ್ಳಾಪುರ | 1.66 | 0.75 |
| 11 | ಶಿವಮೊಗ್ಗ | 0.66 | 0.66 |
| 12 | ದಾವಣಗೆರೆ | 0.66 | 0.66 |
| 13 | ಗುಲ್ಬರ್ಗಾ | 0.67 | 0.66 |
| 14 | ರಾಯಚೂರು | 0.67 | 0.66 |
| 15 | ಯಾದಗಿರಿ | 0.66 | 0.66 |
| 16 | ಬೀದರ್ | 0.67 | 0.66 |
| 17 | ಬಳ್ಳಾರಿ | 0.66 | 0.66 |
| 18 | ಕೊಪ್ಪಳ | 0.66 | 0.66 |
| 19 | ಮೈಸೂರು | 0.70 | 0.70 |
| 20 | ಮಂಡ್ಯ | 0.66 | 0.66 |
| 21 | ಹಾಸನ | 0.67 | 0.66 |
| 22 | ಕೊಡಗು | 0.66 | 0.65 |
| 23 | ಮಂಗಳೂರು (ದಕ್ಷಿಣ ಕನ್ನಡ) | 0.67 | 0.48 |
| 24 | ಚಿಕ್ಕಮಗಳೂರು | 0.66 | 0.66 |
| 25 | ಬೆಳಗಾಂ | 0.70 | 0.70 |
| 26 | ಬಿಜಾಪುರ | 0.66 | 0.66 |
| 27 | ಧಾರವಾಡ | 0.66 | 0.66 |
| 28 | ಹಾವೇರಿ | 0.70 | 0.70 |
| 29 | ಗದಗ | 0.66 | 0.66 |
| 30 | ಉಡುಪಿ | 0.67 | 0.66 |
| 31 | ಚಾಮರಾಜನಗರ | 0.68 | 0.68 |
| 32 | ಕಾರವಾರ | 0.67 | 0.66 |
| 33 | ಬಾಗಲಕೋಟೆ | 0.66 | 0.66 |
| | ಒಟ್ಟು | 23.09 | 21.90 |

(ಲಕ್ಷ್ಮೀಪತಯ್ಯ)
ಸಹಕಾರ ಸಂಘಗಳ ಅಪರ ನಿಬಂಧಕರು,
(ವಸತಿ ಮತ್ತು ಇತರೆ)

ಅನುಬಂಧ-2

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ॥ ಉಮಾಶ್ರೀ ( ನಾಮ ನಿರ್ದೇಶಿತರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1381ಕ್ಕೆ ಅನುಬಂಧ**

ಕಳೆದ 2 ವರ್ಷಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ನೀಡಿದ ಬಡ್ಡಿ ಸಹಾಯಧನ

| Sl No | Name of the district | 2023-24 | 2024-25 |
|---|---|---|---|
| 1 | bagalkot | 11.17 | 47.69 |
| 2 | bangalore rural | 25.04 | |
| 3 | bangalore urban | 19.78 | |
| 4 | belgaum | 116.30 | |
| 5 | bellary | 51.61 | 8.95 |
| 6 | bidar | 2338.32 | 564.18 |
| 7 | bijapur | 0.00 | 115.86 |
| 8 | chikkamagalore | 0.50 | |
| 9 | chitradurga | 1.32 | |
| 10 | davangere | 1.50 | |
| 11 | dharwad | 30.04 | |
| 12 | gadag | 35.85 | |
| 13 | hassan | 667.42 | 260.95 |
| 14 | haveri | 8.98 | |
| 15 | kodagu | 18.23 | 73.57 |
| 16 | kolar & Chikkaballapur | 2574.50 | 362.50 |
| 17 | koppal | 69.25 | 54.83 |
| 18 | mandya | 1113.99 | |
| 19 | mysore | 0.90 | |
| 20 | north canara | 147.09 | |
| 21 | raichur | 18.51 | 24.32 |
| 22 | ramanagar | 62.09 | |
| 23 | Shimoga | 392.57 | 372.00 |
| 24 | south canara | 748.16 | |
| 25 | tumkur | 3.96 | |
| 26 | Udupi | 1387.83 | |
| 27 | chamarajnagar | 0.00 | |
| 28 | kalburgi | 0.00 | |
| | Grand Total | 9844.89 | 1884.85 |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)